

ರೇಖತ್ತಿಗೆ. ಆಕೆ ತನ್ನ ದಢೂತಿ ಕೈ ಮತ್ತು ಕಾಲನ್ನು ತಮ್ಮನ ಮೇಲೆ ಹೇರಿದ್ದರಿಂದ ಅವನಿಗೆ ಏಳಲಾಗಲಿಲ್ಲ.

ಈ ರೇಖತ್ತಿಗೆ ಏನು ಕಡಿಮೆಯವಳಲ್ಲ. ಅವಳನ್ನು ಹಗಲು ಹೊತ್ತು ಮಾತಾಡಿಸಿದರೆ ಸಾಕ್ಷಾತ್ ಮೌನಗೌರಿ. ಅವಳ ಅತ್ತೆ-ಮಾವ-ಗಂಡ ಎಲ್ಲರೂ ದಬ್ಬಾಳಿಕೆಯ ಜನ. ಇಡೀ ದಿನ ಆಜ್ಞೆ ಹೊರಡಿಸುವುದು, ಮಾಡಿದ ಕೆಲಸದಲ್ಲಿ ತಪ್ಪೆಣಿಸುವುದು ಮಾಡುತ್ತಾರೆ. ರೇಖತ್ತಿಗೆ ದೂಸರಾ ಮಾತಾಡುವುದಿಲ್ಲ. ಹೀಗೆ ಇಡೀ ದಿನ ಅವಳು ಮನಸ್ಸಿನೊಳಗೆ ತುಂಬಿಕೊಂಡ ಆಕ್ರೋಶ, ಉದ್ವೇಗ, ನೋವು-ಅಪಮಾನಗಳು ರಾತ್ರಿ ಕೆಟ್ಟ ಕನಸುಗಳಾಗಿ ಹೊರ ಬರುತ್ತವೆ. ಅದಕ್ಕಾಗಿ ರಾತ್ರಿಯಿಡೀ ಏನೇನೋ ಬಡಬಡಿಸುತ್ತಾಳೆ, ಕಿರಿಚುತ್ತಾಳೆ, ಬೇರೇ ಬೇರೆ ಭಾಷೆಗಳಲ್ಲಿ ವಾಚಾಮಗೋಚರವಾಗಿ ಬೈಯುತ್ತಾಳೆ. ಕೆಲವು ಸಲ ದೆವ್ವದ ಜೊತೆ ಕುಸ್ತಿಯಾಡಬೇಕೆಂದು ಗಂಡನ ಕುತ್ತಿಗೆ ಹಿಚಕಿದ್ದಾಳೆ. ಪ್ರತಿ ರಾತ್ರಿ ಇದೇ ಹಣೆಬರಹವಾದಾಗ ತಂತ್ರಿಗಳ ಮನೆಗೆ ಓಡಿ ಹೋಗಿ ಸಲಹೆ ಕೇಳಲಾಯಿತು. ಅವರು ಹಿತ್ತಾಳೆ ಹರಿವಾಣದಲ್ಲಿ ನೀರು- ಅರಿಶಿಣ-ಕುಂಕುಮ ಹಾಕಿ ಅದರಲ್ಲಿ ರೇಖತ್ತಿಗೆಗೆ ಹಣಕಿ ನೋಡಲು ಹೇಳಿದರು. ಸ್ವಲ್ಪ ಹೊತ್ತಿಗೆ ನೀರು ಪೂರಾ ಕರ್ರಗಾಗಿ ಗಣತ ಹೋಯಿತು. ಬಿಂಬವೇ ಕಾಣಲಿಲ್ಲ. ಅದಕ್ಕಾಗಿ ಅವಳಲ್ಲಿ ದುಷ್ಟ ಶಕ್ತಿ ಸೇರಿಕೊಂಡಿದೆ ಎಂದು ನಿಶ್ಚಯಿಸಿ ಕೈಗೆ ಮಂತ್ರಿಸಿದ ದಾರ ಕಟ್ಟಿದರು. ಬೆಳಿಗ್ಗೆ ನಸುಕಿನಿಂದ ಹಿಡಿದು ರಾತ್ರಿ ಮಲಗುವ ತನಕ ಮಂತ್ರಪಠಣ ಕೇಳಬೇಕು ಎಂದರು. ಇಡೀ ದಿನ ಅವಳ ಗಂಡ ಒಂದಲ್ಲ ಒಂದು ಮಂತ್ರ ಹಚ್ಚಿಡುತ್ತಾನೆ. ಅದರ ಗೌಜಿಯಲ್ಲಿಉಳಿದವರಿಗೆ ಬೈಯುವುದು ಕಷ್ಟವಾಗಿದೆ. ಅದಕ್ಕಾಗಿಯೊ ಏನೋ ರೇಖತ್ತಿಗೆಯ ನಿದ್ದೆಗಣ್ಣಿನ ಕುಸ್ತಿಪಂದ್ಯ ನಿಂತಿದೆ.

ಇಷ್ಟೆಲ್ಲ ಜನರ ಬಗ್ಗೆ ಸುದ್ದಿ ಹೇಳಿದರೂ ಇನ್ನೂ ಅರ್ಧ ವಿಷಯ ಹಾಗೆಯೇ ಇದೆ ಮಾರಾಯರೇ. ಸದ್ಯಕ್ಕೆ ವೇಳೆ ಬಹಳ ಆಯಿತಲ್ಲ. ಇನ್ನೂ ನಾವೆಲ್ಲ ಮಲಗಿ ನಿದ್ರೆ ಮಾಡಿ ಗೊರಕೆ ಹೊಡೆದು ಮತ್ತಷ್ಟು ಕಥೆ ಹುಟ್ಟಬೇಕಲ್ಲ ಹಾಗಾಗಿ ಇದನ್ನು ಇಲ್ಲಿಗೇ ಮುಗಿಸೋಣ.

●